೮) ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಗುಂಗರಬಾಗ ಗ್ರಾಮದ ಕಂಡಿಯುವ ನೀರಿನ ಬಾವಿಗೆ ವಿದ್ಯುತ್ ಒದಗಿಸುವುದು.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯಲ್ಲಿ ಗುಂಗರ್ಬಾಗಿ ಎಂಬ ಒಂದು ಗ್ರಾಮವಿರುತ್ತದೆ. ಈ ಗ್ರಾಮದಲ್ಲಿ ೨೬ ಕಂಟುಂಬಗಳು ಇದ್ದು ಎಲ್ಲವೂ ಪರಿಶಿಷ್ಟ ಜನಾಂಗಕ್ಕೆ ಸೇರಿದ್ದು ಈ ಗ್ರಾಮದ ೮ ಜನ ರೈತರು ಭೂಮಿಗೆ ನೀರು ಒದಗಿಸುವ ದೃಷ್ಟಿಯಿಂದ ಈಗ್ಗೆ ೮ ವರ್ಷಗಳ ಕೆಳಗೆ ಒಂದು ಸಾಮೂಹಿಕ ಬಾವಿಯನ್ನು ಪ್ರಾರಂಭಿಸಿದ್ದು, ಅದು ಪ್ರಾರಂಭಗೊಂಡ ನಂತರ ನಿಧಾನವಾಗಿ, ಈ ಬಾವಿ ತೆಗೆಯುವ ಕೆಲಸ ಮುಂಗಿದಿರುತ್ತದೆ. ಸಾಕಷ್ಟು ನೀರು ಇರುತ್ತದೆ ಪಂಪು ಹಾಕಿ ರೈತರಿಗೆ ನೀರು ಕೊಡುವ ದೃಷ್ಟಿಯಿಂದ ಪಂಪನ್ನು ಸಹ ಕೊಂಡಾಗಿದೆ. ಆದರೆ, ವಿದ್ಯುಚ್ಛಕ್ತಿ ಇಲಾಖೆಯವರು ಇದಕ್ಕೆ ವಿದ್ಯುತ್ ಕೊಡದೆ ವಿಳಂಬ ಮಾಡಿರುತ್ತಾರೆ. ಇದರಿಂದಾಗಿ ಬಾವಿಯಲ್ಲಿ ನೀರು ಇದ್ದರೂ ಸಹ ೮ ರೈತರ ಹೊಲಗಳಿಗೆ ನೀರು ಸಿಕ್ಕಿಲ್ಲ, ಆದ್ದರಿಂದ ಈ ಬಾವಿಗೆ ತಕ್ಷಣ ವಿದ್ಯುತ್ ಸರಬರಾಜು ಮಾಡಿ ಪರಿಶಿಷ್ಟ ಜಾತಿಯ ಈ ಬಡ ರೈತರಿಗೆ ಸಹಾಯ ಮಾಡಬೇಕಾಗಿ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಸಚಿವರು) —ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಗುಂಗಿರಬಾಗಿ ಗ್ರಾಮದಲ್ಲಿನ ಸಾಮೂಹಿಕ ನೀರಾವರಿ ಬಾವಿಗೆ ವಿದ್ಯುತ್ ಸರಬರಾಜಿಗಾಗಿ ಚಿಕ್ಕನಾಯಕನಹಳ್ಳಿ ಉಪ-ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರ ಕಛೇರಿಗೆ ಈವರೆಗೆ ಅರ್ಜಿ ಬಂದಿಲ್ಲ. ಈ ದಿನ ಚಿಕ್ಕನಾಯಕನಹಳ್ಳಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಅವರು ಅರ್ಜಿ ಸಲ್ಲಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಅರ್ಜಿ ಬಂದ ನಂತರ ಮುಂದಿನ ಕ್ರಮಕೈಗೊಳ್ಳಲಾಗುತ್ತದೆ.

೯) ರಾಮಕೃಷ್ಣಾ ಮಿಲ್‌ಗೆ ಕಳೆದ ಎರಡು ತಿಂಗಳುಗಳಿಂದ ಬೀಗ ಮುದ್ರೆ ಹಾಕಿರುವುದು.

ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ ಮಾನ್ಯ ಕಾರ್ಮಿಕ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಬೆಂಗಳೂರಿನ ರಾಜಾಜಿನಗರದಲ್ಲಿರುವ ಶ್ರೀ ರಾಮಕೃಷ್ಣಾ ಮಿಲ್ ಎರಡು ತಿಂಗಳುಗಳಿಂದ ಮಾಲೀಕರು ಬೀಗ ಮುದ್ರೆ ಹಾಕಿ ಅಲ್ಲಿ ಕೆಲಸ ಮಾಡುತ್ತಿರುವ ಸುಮಾರು ೮೦೦ ಜನ ಕೆಲಸಗಾರರನ್ನು ನಿರುದ್ಯೋಗಕ್ಕೆ ತಳ್ಳಿದ್ದಾರೆ. ಕೆಲಸಗಾರರು ಶಾಂತರೀತಿಯಿಂದ ಮಿಲ್ಲಿನ ಮುಂದುಗಡೆ ಸರದಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ತಾವು ಸಹ ಮಾಲೀಕರನ್ನು ಕರೆಯಿಸಿ ಬೀಗಮುದ್ರೆಯನ್ನು ಹಿಂತೆಗೆದು ಪ್ರಾರಂಭಿಸಬೇಕೆಂದು ಸಂಧಾನ ಮಾಡಿದ್ದೀರಿ. ಮಾಲೀಕರಿಗೆ ನ್ಯಾಯಾಲಯ ಕೂಡ ಬೀಗಮುದ್ರೆಯನ್ನು ತೆರವು ಮಾಡಬೇಕೆಂದು ಪ್ರತಿಯೊಬ್ಬ ಕಾರ್ಮಿಕರಿಂದ ಅಂಡರ್‌ಟೇಕಿಂಗ್ ಪಡೆಯುವುದನ್ನು ಬಿಡಬೇಕೆಂದು ಆಜ್ಞೆ ಹೊರಡಿಸಿದ್ದಾರೆ. ಆದರೂ ಮಾಲೀಕರು ಬೀಗಮುದ್ರೆ ತೆರವು ಮಾಡಿದರೂ ಪ್ರತಿಯೊಬ್ಬರಿಂದ ಅಂಡರ್‌ಟೇಕಿಂಗ್ ಪತ್ರವನ್ನು ಮಾಲೀಕರು ಆಚ್ಚು ಹಾಕಿಸಿ ಅದರಲ್ಲಿ ಸಹಿ ಮಾಡದೇ ಇರುವ ಕೆಲಸಗಾರರಿಗೆ ಕೆಲಸ ಕೊಡುವುದಿಲ್ಲ ಎಂದು ಮಿಲ್ಲನ್ನು ಬಂದ್ ಮಾಡಿದ್ದಾರೆ. ಅವರು ಮಂತ್ರಿಗಳ ಮಾತನ್ನು ಕೇಳಲಿಲ್ಲ ನ್ಯಾಯಾಲಯದವರ ಆಜ್ಞೆಯನ್ನು ಮಾನ್ಯ ಮಾಡದೆ ಇರುವ ಮಾಲೀಕರಿಗೆ ತಾವು ಸರಿಯಾದ ಶಿಕ್ಷೆಯಿಂದ ಮಿಲ್ಲನ್ನು ಪ್ರಾರಂಭಿಸಿ ಕೆಲಸಗಾರರಿಗೆ ಕೆಲಸ ಒದಗಿಸುವ ಪ್ರಯತ್ನ ಮಾಡುತ್ತೀರಾ? ಇಲ್ಲದಿದ್ದರೆ ಕಾರ್ಮಿಕರಲ್ಲಿ ಆಶಾಂತಿ ಉಂಟಾಗಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಕಾರ್ಮಿಕರಿಗೂ ಪೋಲೀಸಿನವರಿಗೂ ಭಿನ್ನಾಭಿಪ್ರಾಯ ಹೆಚ್ಚಾಗಿ ಆ ಭಾಗದಲ್ಲಿ ಗೊಂದಲ ಉಂಟಾಗುವ ಸಂಭವ ಹೆಚ್ಚಾಗಿದೆ. ಈ ಪರಿಸ್ಥಿತಿಯನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.